# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **491** |
| **ಸದಸ್ಯರ ಹೆಸರು** | : | **ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **12-12-2024** |
| **ಉತ್ತರಿಸಬೇಕಾದ ಸಚಿವರು** | : | **ಉಪ ಮುಖ್ಯಮಂತ್ರಿಗಳು** |

****

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರೇಟರ್ ಬೆಂಗಳೂರು ವ್ಯಾಪ್ತಿಗೆ ಸೇರಿರುವ ಪ್ರದೇಶಗಳು ಯಾವುವು: | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಯೋಜನಾ ಪ್ರದೇಶದ ಗ್ರಾಮಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಆ) | ಬೆಂಗಳೂರು ಸುತ್ತಮುತ್ತಲು ಉಪನಗರಗಳನ್ನು ಸ್ಥಾಪಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ: ಇದ್ದಲ್ಲಿ, ಯಾವ ಯಾವ ಪ್ರದೇಶದಲ್ಲಿ ಉಪನಗರಗಳನ್ನು ಸ್ಥಾಪಿಸಲಾಗುವುದು; ಇದರ ಉದ್ದೇಶ ಹಾಗೂ ವ್ಯಾಪ್ತಿ ಬಗ್ಗೆ ಮಾಹಿತಿ ನೀಡುವುದು: | ಹೌದು.<br><br>ಬಿಎಂಆರ್‌ಡಿಎ ಕಾರ್ಯವ್ಯಾಪ್ತಿಯಲ್ಲಿ ಸರ್ಕಾರದ ಆದೇಶ ದಿನಾಂಕ: 18.10.2006ರಲ್ಲಿ ಬಿಡದಿ, ಸಾತನೂರು, ರಾಮನಗರ, ಸೋಲೂರು ಮತ್ತು ನಂದಗುಡಿ ಸೇರಿದಂತೆ ಒಟ್ಟು 05 ಸಮಗ್ರ ಉಪನಗರ ಯೋಜನೆಯನ್ನು ಅಭಿವೃದ್ಧಿಪಡಿಸಲು ಅನುಮತಿ ನೀಡಲಾಗಿತ್ತು. ಅದರಂತೆ ಬಿಡದಿ ಸಮಗ್ರ ಉಪನಗರವನ್ನು ಅನುಷ್ಠಾನಗೊಳಿಸಲು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.<br><br>ಅದರಂತೆ ಪ್ರಾಯೋಗಿಕವಾಗಿ ಬಿಡದಿ ಸಮಗ್ರ ಉಪನಗರ ಅಭಿವೃದ್ಧಿ ಯೋಜನೆ (ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಅಭಿವೃದ್ಧಿ ಯೋಜನೆ) ಯನ್ನು ಕೈಗೆತ್ತಿಕೊಂಡಿದ್ದು, ಉದ್ದೇಶಿತ ಉಪನಗರವು 10 ಗ್ರಾಮಗಳ ವ್ಯಾಪ್ತಿಯಲ್ಲಿ ಒಟ್ಟು 8943 ಎಕರೆ 35 ಗುಂಟೆ ವಿಸ್ತೀರ್ಣ ಹೊಂದಿದ್ದು, ಈ ಯೋಜನೆಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ.<br><br>ಉಪನಗರ ಯೋಜನೆಯು ಒಂದು ಅಥವಾ ಹೆಚ್ಚಿನ ನಿರ್ದಿಷ್ಟ ಆರ್ಥಿಕ ಚಟುವಟಿಕೆಯನ್ನು ಏಕಕಾಲದಲ್ಲಿ ವಸತಿ ಘಟಕಗಳೊಂದಿಗೆ ಕೇಂದ್ರೀಕರಿಸುವ Work-Live-Play ಪರಿಕಲ್ಪನೆಯನ್ನು ಹೊಂದಿರುತ್ತದೆ. |
| ಇ) | ಉಪನಗರಗಳನ್ನು ಸ್ಥಾಪಿಸಲು ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು: ಎಷ್ಟು ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗುವುದು: | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರನ್ವಯ ಉದ್ದೇಶಿತ ಸಮಗ್ರ ಉಪನಗರ ಯೋಜನಾ ಪ್ರದೇಶದಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ಉದ್ದೇಶವಿದ್ದು, ಕಂದಾಯ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. |
| ಈ) | ಉಪನಗರಗಳನ್ನು ಸ್ಥಾಪಿಸಿದಾಗ ಬಡವರಿಗೆ ಉಚಿತ ನಿವೇಶನ ನೀಡುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ: ಹಾಗಿದ್ದಲ್ಲಿ, ಅದರ ಮಾನದಂಡಗಳೇನು; ಹಾಗೂ ಕೈಗೊಂಡಿರುವ ಕ್ರಮಗಳೇನು? | ಇಲ್ಲ. |

ಸಂಖ್ಯೆ: ನಅಇ 410 ಬಿಎಂಆರ್ 2024 (ಇ)

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂ. 471 ಕ್ಕೆ ಅನುಬಂಧ

422

(7)

R. No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**


| ಭಾಗ- III | ಬೆಂಗಳೂರು, ಶುಕ್ರವಾರ, ಜೂನ್ ೩, ೨೦೧೬ (ಜ್ಯೇಷ್ಠ ೧೩, ಶಕ ವರ್ಷ ೧೯೩೮) | ನಂ. ೭೮೬ |
|---|---|---|
| Part-III | Bengaluru, Friday, June 3, 2016 (Jyeishta 13, Shaka Varsha 1938) | No. 786 |


ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 104 ಬಿಎಂಆರ್ 2014, ಬೆಂಗಳೂರು, ದಿನಾಂಕ: 03-06-2016

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಕಲಂ 4(ಎ)(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ಸರ್ಕಾರವು ದಿನಾಂಕ: 03-06-2016 ರಿಂದ ಜಾರಿಗೆ ಬರುವಂತೆ ಅನುಬಂಧ-1 ರಲ್ಲಿ ವಿವರಿಸಿರುವ 38 ಗ್ರಾಮಗಳನ್ನೊಳಗೊಂಡಂತೆ ಯೋಜನಾ ಪ್ರದೇಶವನ್ನು ಘೋಷಿಸಿದೆ ಮತ್ತು ಇದನ್ನು ಗ್ರೇಟರ್ ಬೆಂಗಳೂರು-ಬಿಡದಿ ಸ್ಮಾರ್ಟ್‌ಸಿಟಿ ಸ್ಥಳೀಯ ಯೋಜನಾ ಪ್ರದೇಶವೆಂದು ನಾಮಕರಣ ಮಾಡಲಾಗಿದೆ. ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಗಳನ್ನು ಅನುಬಂಧ-2 ರಲ್ಲಿ ನಮೂದಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ನರಸಿಂಹಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ-1

ಗ್ರೇಟರ್ ಬೆಂಗಳೂರು-ಬಿಡದಿ ಸ್ಮಾರ್ಟ್ ಸಿಟಿ ಸ್ಥಳೀಯ ಯೋಜನಾ ಪ್ರದೇಶದ ಗ್ರಾಮಗಳ ವಿವರ

| ಕ್ರ.ಸಂ. | ತಾಲ್ಲೂಕು | ಹೋಬಳಿ | ಗ್ರಾಮಗಳ ಹೆಸರು | ಜನಸಂಖ್ಯೆ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|---|---|---|
| 1 | ರಾಮನಗರ | ಬಿಡದಿ | ಅಬ್ಬನಕುಪ್ಪೆ | 2807 | 368.52 |
| 2 | | | ಅಳ್ಳಾಳಸಂದ್ರ | 1500 | 594.01 |
| 3 | | | ಬನ್ನಿಗೆರೆ | 1448 | 487.45 |
| 4 | | | ಬಿಡದಿ | 9917 | 173.74 |
| 5 | | | ಬಸವಮೇಲನಹಳ್ಳಿ | 79 | 102.1 |
| 6 | | | ಬೋರೆಹಳ್ಳಿ | 266 | 132.91 |
| 7 | | | ಬೈರಮಂಗಲ | 2480 | 547.56 |
| 8 | | | ಗಾಣಕಲ್ಲು | 570 | 204.15 |

| ಕ್ರ.ಸಂ. | ತಾಲ್ಲೂಕು | ಹೋಬಳಿ | ಗ್ರಾಮಗಳ ಹೆಸರು | ಜನಸಂಖ್ಯೆ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|---|---|---|
| 9 | | | ಗೊಲ್ಲರಪಾಳ್ಯ | 486 | 141.95 |
| 10 | | | ಗೋಪಹಳ್ಳಿ | 2707 | 882.08 |
| 11 | | | ಹೆಜ್ಜಾಲ | 3483 | 332.56 |
| 12 | | | ಹೊಸೂರು | 2273 | 1037.11 |
| 13 | | | ಹುಲ್ತಾರು ರಾಜ್ಯ ಅರಣ್ಯ ವಲಯ | 655 | 1335.82 |
| 14 | | | ಇಟ್ಟಮಡು | 2059 | 504.71 |
| 15 | | | ಕಾಕರಾಮನಹಳ್ಳಿ | 747 | 222.92 |
| 16 | | | ಕಲ್ಲುಗೋಪನಹಳ್ಳಿ | 1184 | 257.78 |
| 17 | | | ಕಂಚುಗಾರನಹಳ್ಳಿ | 1083 | 637.79 |
| 18 | | | ಕಂಚುಗಾರನಹಳ್ಳಿ ಕಾವಲ್ | 24 | 45.13 |
| 19 | | | ಕೆಂಪದ್ಯಾಪನಹಳ್ಳಿ | 490 | 236.45 |
| 20 | | | ಕೆಂಪಯ್ಯನಪಾಳ್ಯ | 1355 | 160.73 |
| 21 | | | ಕೆಂಚನಕುಪ್ಪೆ | 3461 | 413.28 |
| 22 | | | ಮಂಡಲಹಳ್ಳಿ | 33 | 37.71 |
| 23 | | | ಮುದ್ದಾಪುರ ಕರೇನಹಳ್ಳಿ | 969 | 605.23 |
| 24 | | | ರಾಮನಹಳ್ಳಿ | 1439 | 367.76 |
| 25 | | | ಐವಾಗಿಲು | 30 | 71.89 |
| 26 | | | ಯೆರೆಪಾಳ್ಯ | 30 | 92.35 |
| 27 | | ಕೈಲಾಂಚ | ಅಣ್ಣಹಳ್ಳಿ | 1154 | 310.99 |
| 28 | | | ಬೆಣ್ಣಹಳ್ಳಿ | 921 | 295.19 |
| 29 | | | ಮಂಚೇಗೌಡನಪಾಳ್ಯ | 633 | 358.97 |
| 30 | | ರಾಮನಗರ | ಹಾಗಲಹಳ್ಳಿ | 2784 | 1037.79 |
| 31 | | | ಬಳಗುಳಿ | 0 | 87.37 |
| 32 | | | ಧಾರಾಪುರ | 256 | 151.97 |
| 33 | | | ಕೆಂಪನಹಳ್ಳಿ | 1009 | 202.46 |
| 34 | | | ಕೇತೋಹಳ್ಳಿ | 2404 | 587.67 |
| 35 | | | ಮಾದಾಪುರ | 1187 | 393.66 |
| 36 | | | ಮಾಯಗಾನಹಳ್ಳಿ | 1623 | 475.12 |
| 37 | | | ಬಸವನಪುರ | 1224 | 233.86 |
| 38 | ಕನಕಪುರ | ಹಾರೋಹಳ್ಳಿ | ವಡೇರಹಳ್ಳಿ (ಭಾಗಶಃ) | 0 | 25.23 |
| | | | ಒಟ್ಟು | 54770 | 14153.97 |

ಎನ್. ನರಸಿಂಹಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.